ಪ್ರೀತಿಸಿದವರೊಂದಿಗೆ ಅಥವಾ ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುವುದು ಅನಾರೋಗ್ಯದಿಂದ ಸಾವನ್ನಪ್ಪುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ ಎಂದಿದೆ ಸಂಶೋಧನೆ.



ಹಲವು ಸಂಶೋಧನೆಗಳ ನಂತರ ಮುಖ್ಯವಾಗಿ ಎಂಟು ರೀತಿಯ ಪ್ರೀತಿಯನ್ನು ಕಂಡುಕೊಳ್ಳಲಾಗಿದೆ.

- ಉತ್ಸುಕತೆಯ ಪ್ರೀತಿ
- ನಿರಂತರ ಪ್ರೀತಿ
- ತಮಾಷೆಯ ಪ್ರೀತಿ
- ಸಾರ್ವತ್ರಿಕ ಪ್ರೀತಿ
- ಆಳವಾದ ಸ್ನೇಹ
- ಸ್ವಪ್ರೇಮ
- ಕೌಟುಂಬಿಕ ಪ್ರೀತಿ
- ಉನ್ಮಾದದ ಪ್ರೀತಿ



ಒಬ್ಬ ವ್ಯಕ್ತಿಯು ತನ್ನನ್ನು ಮತ್ತೊಬ್ಬರು ಪ್ರೀತಿಸುತ್ತಿದ್ದಾರೆ ಎಂದು ತಪ್ಪು ಭಾವಿಸುವ ಸ್ಥಿತಿಯನ್ನು ಎರೊಟೊಮೇನಿಯಾ ಎಂದು ಕರೆಯಲಾಗುತ್ತದೆ. ಈ ಎರೊಟೊಮೇನಿಯಾವನ್ನು 'ಭ್ರಮೆಯ ಪ್ರೀತಿ' ಎಂದು ಕರೆಯಲಾಗುತ್ತದೆ. ಬೇಗ ಎಚ್ಚೆತ್ತುಕೊಳ್ಳದಿದ್ದರೆ ಅಪಾಯಕರ ಸ್ಥಿತಿಯನ್ನೂ ತಲುಪಬಹುದು.

ಇದುವರೆಗೂ ದೊರೆತಿರುವ ಮಾಹಿತಿಗಳ ಪ್ರಕಾರ, ಸಾಹಿತ್ಯದಲ್ಲಿ ದಾಖಲಾಗಿರುವ ಮೊಟ್ಟ ಮೊದಲ ಪ್ರೇಮಕಥೆ 'ಲೈಲಾ ಮಜ್ನೂ'. 7ನೇ ಶತಮಾನದಲ್ಲಿ ಬರೆಯಲಾದ ಅರೇಬಿಕ್ ಕಥೆ ಇದಾಗಿದೆ.



ಇಷ್ಟವಾದ ವ್ಯಕ್ತಿಯನ್ನು ನೋಡುತ್ತಿದ್ದಂತೆ ಅಥವಾ ಪ್ರೀತಿಸಿದ ವ್ಯಕ್ತಿಯು ಎದುರು ಬಂದಾಗ ಹೊಟ್ಟೆಯಲ್ಲಿ ಚಿಟ್ಟೆ ಓಡಾಡಿದಂಥ ಅನುಭವ ಆಗಿರುತ್ತದೆ. ಇದು ನಿಜ ಕೂಡ. ಇದು ಅಡ್ರಿನಾಲಿನ್ ಹಾರ್ಮೋನಿನಿಂದ ಆಗುವ ಕೆಲಸ. ವ್ಯಕ್ತಿಯಲ್ಲಿ ಉತ್ಸಾಹ, ಆತಂಕ, ಭಯಕ್ಕೆ ಕಾರಣವಾಗುವ, ಅದಕ್ಕೆ ಪ್ರತಿಕ್ರಿಯಿಸಲು ಸಹಕರಿಸುವ ಈ ಹಾರ್ಮೋನು, ಪ್ರೀತಿಯಲ್ಲಿದ್ದವರು ಎದುರಿಗೆ ಬಂದಾಗಲೂ ಅದೇ ಭಾವನೆಯನ್ನು ತರುತ್ತದೆ.



## ಪ್ರೀತಿ ಚಿಗುರುವಾಗ...

**1** ವ್ಯಕ್ತಿಯನ್ನು ನೋಡುತ್ತಿದ್ದಂತೆ, ಅವರೆಡೆಗೆ ಕೊಂಚ ಆಕರ್ಷಿತವಾಗುತ್ತಿದ್ದಂತೆ ಮೆದುಳಿನ ಹೈಪೊಥಲಾಮಸ್ ಭಾಗ ಸಕ್ರಿಯಗೊಂಡು ಡೊಪಮಿನ್ ಹಾರ್ಮೋನು ಬಿಡುಗಡೆ ಮಾಡುತ್ತದೆ. ಇದು ಉತ್ಸುಕತೆ ಹಾಗೂ ಭಾವಪರವಶತೆಗೆ ಕಾರಣವಾಗಿ ಪ್ರೀತಿಗೆ ಇಂಬು ಕೊಡುತ್ತದೆ.

ನೋರಾಡ್ರಲಿನ್ ಎಂಬ ರಾಸಾನಿಯಕ ಮೆದುಳಿನಲ್ಲಿ ಉತ್ಪತ್ತಿಯಾಗಿ ಹೃದಯ ಚಂಚಲಗೊಳ್ಳುವಂತೆ ಮಾಡುತ್ತದೆ. ಮೊದಲ ಪ್ರೀತಿಯ ಉತ್ಸುಕತೆಯನ್ನು ಹೆಚ್ಚಿಸುತ್ತದೆ.

**2** ಡೊಪಮಿನ್ ಮಟ್ಟ ಒಂದೆಡೆ ಹೆಚ್ಚುತ್ತಿದ್ದಂತೆ, ಮನಸ್ಥಿತಿಯ ನಿರ್ವಹಣೆ, ಕಲಿಕೆ, ಸ್ಮರಣೆಗೆ ಅನುವು ಮಾಡಿಕೊಡುವ ಸಿರೊಟೊನಿನ್ ಕಡಿಮೆಯಾಗುತ್ತದೆ. ಸಿರೊಟೊನಿನ್‌ನ ಮಟ್ಟ ತಗ್ಗುತ್ತಿದ್ದಂತೆ ವ್ಯಕ್ತಿಯಲ್ಲಿ ಭಾವನೆಗಳು ಏರಿಳಿತವಾಗುತ್ತವೆ. ಇದಕ್ಕೇ ಅಲ್ಲವೇ ಪ್ರೀತಿ ಅರೆಮರುಳಿನಂತೆ ಎನ್ನುವುದು? ಪ್ರೀತಿಯಲ್ಲಿರುವ ವ್ಯಕ್ತಿಯಲ್ಲಿನ ಸಿರೊಟೊನಿನ್ ಮಟ್ಟವು ಒಬ್ಸೆಸಿವ್ ಕಂಪಲ್ಸಿವ್ ಡಿಸಾರ್ಡರ್ (ಗೀಳು) ಹೊಂದಿರುವ ವ್ಯಕ್ತಿಯಲ್ಲಿನ ಮಟ್ಟವನ್ನೇ ಹೋಲುತ್ತದೆ. ಹೀಗಾಗಿ ಗೀಳು ಹಾಗೂ ಆಕರ್ಷಣೆಯ ಭಾವನೆಗೆ ಇವು ಪ್ರೇರಣೆ ನೀಡುತ್ತವೆ. ಜೊತೆಗೆ ಪದೇ ಪದೇ ಖುಷಿ ಬಯಸುವಂತೆ ಮಾಡುತ್ತದೆ.

**3** ಮೆದುಳಿನ ಜೊತೆಗೆ ದೇಹ ಕೂಡ ನರಕೋಶದ ಬೆಳವಣಿಗೆಗೆ ಅವಶ್ಯಕವಾಗಿರುವ 'ನರ್ವ್ ಗ್ರೋಥ್ ಫ್ಯಾಕ್ಟರ್' (NGF) ಎಂಬ ಪ್ರೊಟೀನ್ ಉತ್ಪಾದಿಸುತ್ತದೆ.

- ಹೊಸದಾಗಿ ಪ್ರೀತಿಯಲ್ಲಿ ಬಿದ್ದವರಲ್ಲಿ ಈ ಅಂಶ ಹೆಚ್ಚಿರುತ್ತದೆ.
- ಪ್ರೀತಿ ಮಾಡುತ್ತಿರುವವರಿಗಿಂತ ಪ್ರೀತಿ ಮಾಡದವರು ಹಾಗೂ ದೀರ್ಘಕಾಲ ಸಂಬಂಧದಲ್ಲಿ ಇಲ್ಲದವರಲ್ಲಿ ಈ ಅಂಶ ಕಡಿಮೆ ಇರುತ್ತದೆ.
- ರೊಮ್ಯಾಂಟಿಕ್ ಭಾವನೆಗಳೊಂದಿಗೆ ದೇಹದಲ್ಲಿನ ಈ ಎನ್‌ಜಿಎಫ್ ಮಟ್ಟ ನೇರಾನೇರ ಸಂಬಂಧ ಹೊಂದಿರುತ್ತದೆ.

**4** ಮೆದುಳಿನಲ್ಲಿ ಹೈಪೊಥಲಾಮಸ್, ಆಕ್ಸಿಟೋಸಿನ್ ಹಾಗೂ ವ್ಯಾಸೊಪ್ರೆಸ್ ಈ ಎರಡೂ ರಾಸಾಯನಿಕಗಳನ್ನು ಉಂಟು ಮಾಡುತ್ತದೆ. ಈ ಎರಡೂ ಕೂಡ ಬಾಂಧವ್ಯ ಗಟ್ಟಿಗೊಳ್ಳಲು ಹಾಗೂ ಬದ್ಧತೆಯಿಂದಿರಲು ಕಾರಣವಾಗುತ್ತವೆ.

ಈ ರಾಸಾಯನಿಕಗಳು ಪಿಟ್ಯುಟರಿ ಗ್ರಂಥಿಯಲ್ಲಿ ಶೇಖರಣೆಯಾಗಿ ದೇಹದಲ್ಲಿರುತ್ತವೆ. ಪ್ರೀತಿಯ ತೀವ್ರ ಹಂಬಲದಲ್ಲಿ ಈ ಹಾರ್ಮೋನುಗಳು ರಕ್ತನಾಳಗಳಲ್ಲಿ ಸಂಚಲನ ನಡೆಸುತ್ತವೆ. ದೀರ್ಘಾವಧಿಯಲ್ಲಿ ಒಂದು ಸಂಬಂಧ ಯಶಸ್ವಿಯಾಗಲು ಈ ಎರಡೂ ರಾಸಾಯನಿಕಗಳು ಕಾರಣ.

**5** ಮೆದುಳಿನಲ್ಲಿ ಡೊಪಮಿನ್ ಉತ್ಪಾದನೆ ನಂತರ ಅಮಿಗ್‌ಡಾಲಾ ಚಟುವಟಿಕೆ ನಿಲ್ಲಿಸುತ್ತದೆ. ಇದರಿಂದಾಗಿ ಭಯ ಹಾಗೂ ಒತ್ತಡ ಕಡಿಮೆಯಾದಂತೆ ಅನ್ನಿಸುತ್ತದೆ. ಹೀಗಾಗಿಯೇ ಪ್ರೀತಿಯಲ್ಲಿ ಬಿದ್ದವರಿಗೆ ಧೈರ್ಯ ಹೆಚ್ಚು ಎಂಬ ಮಾತಿದೆ. ಈ ಎಲ್ಲದರ ಫಲವಾಗಿ ಇಬ್ಬರು ವ್ಯಕ್ತಿಗಳ ನಡುವೆ ಬಂಧ ಗಟ್ಟಿಯಾಗುತ್ತದೆ.